KACB310023742021

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಚಿಂತಾಮಣಿ**

**ಉಪಸ್ಥಿತರು** ಃ ಶ್ರೀಮತಿ ಶಕುಂತಲ ಆರ್., ಬಿ ಎ. ಎಲ್.ಎಲ್.ಎಂ.
ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿ, ಚಿಂತಾಮಣಿ.

**ಸಿಸಿ ನಂಃ 1123/2021**

**ದಿನಾಂಕಃ 13 ನೇ ಆಗಸ್ಟ್ – 2026**

**ಫಿಯಾರ್ದುದಾರರು** ಃ ಚಿಂತಾಮಣಿ ನಗರ ಪೊಲೀಸ್ ಠಾಣೆ

(ಸರ್ಕಾರದ ಪರವಾಗಿ ಸ.ಸ.ಅ.)

**ವಿರುದ್ಧ**

ಆರೋಪಿತರುಃ

1. ಶ್ರೀ ಮಂಜುನಾಥ ರೆಡ್ಡಿ ಕೆ. ಬಿನ್ ನಾಗರಾಜ್ ರೆಡ್ಡಿ
**29** ವರ್ಷ, ವಾಸಃ ಪಿ.ಟಿ.ಎಂ. ಗ್ರಾಮ ಮತ್ತು ಮಂಡಲಂ
ಚಿತ್ತೂರು, ಆಂಧ್ರ ಪ್ರದೇಶ

2. ಶ್ರೀ ಕಲ್ಲೇಗಾರಿ ನಾಗರಾಜರೆಡ್ಡಿ ಬಿನ್ ದಾಸಣ್ಣ
**58** ವರ್ಷ, ವಾಸಃ ಪಿ.ಟಿ.ಎಂ. ಗ್ರಾಮ ಮತ್ತು ಮಂಡಲಂ
ಚಿತ್ತೂರು, ಆಂಧ್ರ ಪ್ರದೇಶ

3. ಶ್ರೀಮತಿ ರಾಧ ಕೆ. ಕೋಂ ನಾಗರಾಜ್ ರೆಡ್ಡಿ
**47** ವರ್ಷ, ವಾಸಃ ಪಿ.ಟಿ.ಎಂ. ಗ್ರಾಮ ಮತ್ತಿು ಮಂಡಲಂ
ಚಿತ್ತೂರು, ಆಂಧ್ರ ಪ್ರದೇಶ

(**ಆರೋಪಿತರ ಪರ ಶ್ರೀ ಜಿ.ಎಂ.ಐ ., ವಕೀಲರು**)

| | |
|---|---|
| ಘಟನೆ ನಡೆದ ದಿನಾಂಕ | 28.02.2020 |
| ವರದಿ ಮಾಡಿದ ದಿನಾಂಕ | 02.10.2020 |
| ಪ್ರಕರಣದ ಸ್ವರೂಪ | ಭಾ.ದಂ.ಸಂ. ಕಲಂಃ 498(ಎ),504, ಸಹವಾಚಕ 34 ಐಪಿಸಿ ಮತ್ತು ವರದಕ್ಷಿಣೆ ನಿಷೇದ ಕಾಯ್ದೆ 3 ಮತ್ತು 4 |
| ಫಿರ್ಯಾದುದಾರರ ಹೆಸರು | ಶ್ರೀಮತಿ ಪ್ರವಳಿಕ |
| ಸಾಕ್ಷಿ ವಿಚಾರಣೆ ಪ್ರಾರಂಭವಾದಿ ದಿನಾಂಕ | 26.03.2026 |
| ಸಾಕ್ಷಿ ವಿಚಾರಣೆ ಮುಗಿದ ದಿನಾಂಕ | 14.07.2026 |
| ನ್ಯಾಯಾಧೀಶರ ಅಭಿಪ್ರಾಯ | ಆರೋಪಿತರು ತಪಿತಸ್ಥರಿರುವುದಿಲ್ಲಾ |

Sd/-
(ಶ್ರೀಮತಿ ಶಕುಂತಲ.ಆರ್)
ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚಿಂತಾಮಣಿ.

## ತೀರ್ಪು

ಪಿ.ಎಸ್.ಐ. ಚಿಂತಾಮಣಿ ನಗರ ಪೊಲೀಸ್ ಠಾಣೆ ಇವರು ಆರೋಪಿತರ ವಿರುದ್ಧ ತನಿಖೆಯನ್ನು ಪೂರೈಸಿ ಭಾರತೀಯ ದಂಡ ಸಂಹಿತೆ ಕಲಂ 498(ಎ),504 ಸಹವಾಚಕ 34 ಐಪಿಸಿ ಮತ್ತು ವರದಕ್ಷಿಣೆ ನಿಷೇದ ಕಾಯ್ದೆ 3 ಮತ್ತು 4 ಅಡಿಯಲ್ಲಿ ಅಭಿಯೋಜನೆಯ ಮೂಲಕ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಾರಂಶವೇನೆಂದರೆಃ**

ದಿನಾಂಕಃ 16.06.2019 ರಂದು ಚಾಸಾ.1 ಮತ್ತು 1 ನೇ ಆರೋಪಿ ರವರೊಂದಿಗೆ ಹಿಂದೂ ಸಂಪ್ರಾಯದಂತೆ ಮದುವೆಯಾಗಿದ್ದು ಮದುವೆಗೆ ಚಾಸಾ.2

ರಿಂದ 7 ರವರ ಸಮಕ್ಷಮ ಚಾಸಾ.1 ರವರಿಗೆ ಬಂಗಾರದ ಒಡವೆಗಳಾದ 55 ಗ್ರಾಂ ತೂಕದ ಹಾರ, 120 ಗ್ರಾಂನ 3 ಸೆಟ್ ಬಳೆಗಳು, 90 ಗ್ರಾಂನ ಕಾಸಿನ ಸರ, 80 ಗ್ರಾಂನ ಹಸಿರು ಕಲ್ಲಿನ ಹಾರ, 40 ಗ್ರಾಂನ ಮಿನಿ ಎಲೆಗಳ ಹಾರ, 35 ಗ್ರಾಂನ ಸ್ಟೋನ್ ಮಿನಿ ಹಾರ, 4 ಕೆಜಿ ಬೆಳ್ಳಿ ವಸ್ತುಗಳನ್ನು ಹಾಗೂ 3 ಲಕ್ಷ ರೂ. ಬೆಲೆ ಬಾಳುವ ರೇಷ್ಮೆ ಸೀರೆಗಳನ್ನು ಹಾಗೂ 1 ನೇ ಆರೋಪಿಯಾದ ನಿಮಗೆ ವರದಕ್ಷಿಣೆಯಾಗಿ 40 ಗ್ರಾಂನ ಕತ್ತಿನ ಚೈನ್, 35 ಗ್ರಾಂನ ಬ್ರಾಸ್‌ಲೈಟ್, 20 ಮತ್ತು 16 ಗ್ರಾಂವುಳ್ಳ 2 ಉಂಗುರ, 2 ಲಕ್ಷ ರೂ. ಬೆಲೆ ಬಾಳುವ ಬಟ್ಟೆಗಳನ್ನು ಮತ್ತು 10 ಲಕ್ಷ ನಗದು ಹಣವನ್ನು ಕೊಟ್ಟಿದ್ದು ಮದುವೆಯಾದ 3 ತಿಂಗಳ ಕಾಲ ಚಸಾ.1 ರವರನ್ನು ಚೆನ್ನಾಗಿ ನೋಡಿಕೊಂಡಿದ್ದು, ನಂತರ ಚಸಾ.1 ರವರರಿಗೆ 1 ರಿಂದ 3 ನೇ ಆರೋಪಿಗಳು ನಿಮ್ಮ ತವರು ಮನೆಯಿಂದ ಇನ್ನು ಹೆಚ್ಚಿಗೆ 10 ಲಕ್ಷ ರೂ ವರದಕ್ಷಿಣೆ ಹಣವನ್ನು ತರುವಂತೆ ಅವಾಚ್ಯ ಶಬ್ದಗಚಿಂದ ಬೈದು ಮಾನಸಿಕ ಹಾಗೂ ದೈಹಿಕವಾಗಿ ಹಿಂಸೆ ನೀಡಿ ಚಾಸಾ.1 ರವರನ್ನು ಮನೆಯಿಂದ ಹೊರೆಗೆ ಹಾಕಿ ತವರು ಮನೆಗೆ ಕಳುಹಿಸಿದ್ದು ದಿನಾಂಕಃ 28.02.2020 ರಂದು ಚಾಸಾ.2 ರವರ ಮನೆಗೆ ಆರೋಪಿ.1 ರಿಂದ 3 ರವರುಗಳನ್ನು ಕರೆಯಿಸಿ ಚಾಸಾ.1 ರಿಂದ 6 ರವರ ಸಮಕ್ಷಮ ಚಾಸಾ.2 ರವರು ಈಗ ಸಧ್ಯಕ್ಕೆ ತನ್ನ ಬಳಿ ಹಣವಿಲ್ಲವೆಂದು ತಿಳಿಸಿದಾಗ ಆರೋಪಿ.1 ರಿಂದ 3 ರವರಿಗೆ ಹಣ 10 ಲಕ್ಷ ರೂ ಕೊಡುವವರೆಗೆ ಚಾಸಾ.1 ರವರನ್ನು ನಮ್ಮ ಮನೆಗೆ ವಾಪಸ್ಸು ಕರೆದುಕೊಂಡು ಹೋಗುವುದಿಲ್ಲವೆಂದು ಚಸಾ.1 ರಿಂದ 3 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ

498(ಎ), 504 ಸಹವಾಚಕ 34 ಐ.ಪಿ.ಸಿ ಮತ್ತು ವರದಕ್ಷಿಣೆ ಕಾಯಿದೆ ಕಲಂ.3 ಮತ್ತು 4 ರಡಿಯಲ್ಲಿ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**3.** ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿದ ನಂತರ ಪೊಲೀಸರು ಸಲ್ಲಿಸಿದ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ, ಆರೋಪಿಗಳ ವಿರುದ್ಧ ಸಂಜ್ಞೆಯನ್ನು ತೆಗೆದುಕೊಂಡು, ಆರೋಪಿಗಳು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರಡಿಯಲ್ಲಿ ನೀಡಲಾದ ಪದವತ್ತವಾದ ಅಧಿಕಾರವನ್ನು ಚಲಾಯಿಸಿ ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲೆಗಳನ್ನು ಉಚಿತವಾಗಿ ನೀಡಿದ್ದು, ಆರೋಪಿಗಳ ಮೇಲೆ ದೋಷಾರೋಪಣೆಯನ್ನು ರಚಿಸಿ ಆರೋಪಿಗಳಿಗೆ ಓದಿ ಹೇಳಲಾಗಿ, ಆರೋಪಿಗಳು ವಿಚಾರಣೆಯಾಗಬೇಕೆಂದು ತಿಳಿಸಿರುತ್ತಾರೆ.

**4.** ಅಭಿಯೋಜನೆಯು ಆರೋಪಿಗಳ ವಿರುದ್ಧವಾದ ಅಪರಾಧವನ್ನು ಸಾಭೀತುಪಡಿಸಲು ಫ್ರಾಸಾ−1 ರಿಂದ ಫ್ರಾಸಾ−4 ರವರನ್ನು ವಿಚಾರಣೆಗೆ ಒಳಪಡಿಸುವ ಮೂಲಕ ನಿಪಿ−1 ರಿಂದ ನಿಪಿ−24 ದಾಖಲಾತಿಗಳನ್ನು ಗುರುತಿಸಿರುತ್ತಾರೆ. ಫ್ರಾಸಾ−1 ರಿಂದ ಫ್ರಾಸಾ−4 ರವರು ಅಭಿಯೋಜನೆಗೆ ವಿರುದ್ಧವಾದ ಸಾಕ್ಷ್ಯ ನುಡಿದಿದ್ದರಿಂದ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಗಳ ಹೇಳಿಕೆಗಳನ್ನು ಮನ್ನಾ ಮಾಡಲಾಯಿತು ಮತ್ತು ಆರೋಪಿಗಳು ತಮ್ಮ ಪರ ಯಾವುದೇ ಸಾಕ್ಷ್ಯ ವಿಚಾರಣೆ ಮಾಡುವುದರ ಮೂಲಕ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲಾ.

**5.** ಉಭಯ ಪಕ್ಷಗಾರರ ವಾದವನ್ನು ಆಲಿಸಿ ದಾಖಲೆಗಳನ್ನು ಪರಿಶೀಲಿಸಿದೆ.

**6.** ಈ ಮೇಲಿನ ಅಂಶಗಳಿಂದ ನ್ಯಾಯಾಲಯದ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶಃ 1** ಮೊದಲನೆಯದಾಗಿ 1 ನೇ ಆರೋಪಿ ಚಾಸಾ-1 ಪ್ರವಲ್ಲಿಕಾ ರವರನ್ನು ದಿನಾಂಕ 16/06/2019 ರಂದು ಚಿಂತಾಮಣಿ ನಗರದ ಕೆ.ಎಂ.ಡಿ. ಕಲಾಣ ಮಂಟಪದಲ್ಲಿ ಹಿಂದೂ ಸಂಪ್ರದಾಯದಂತೆ ಮದುವೆಯಾಗಿದ್ದು, ಮದುವೆಯಾದ ಮೂರು ತಿಂಗಳ ಕಾಲ ಚೆನ್ನಾಗಿ ನೋಡಿಕೊಂಡಿದ್ದು, ನಂತರ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರಿಗೆ ನಿಮ್ಮ ತವರು ಮನೆಯಿಂದ ಇನ್ನು ಹೆಚ್ಚಿಗೆ ವರದಕ್ಷಿಣೆ ಹಣವನ್ನು ತರುವಂತೆ ಅವಾಚ್ಯ ಶಬ್ದಗಳಿಂದ ಬೈದು ಮನೆಯಿಂದ ಹೊರಗೆ ಹಾಕಿ ಮಾನಸಿಕವಾಗಿ ಹಾಗೂ ದೈಹಿಕವಾಗಿ ಹಿಂಸೆ ನೀಡಿ, ಭಾರತ ದಂಡ ಸಂಹಿತೆ ಕಲಂ 498(ಎ) ಸಹ ಕಲಂ 34 ರಡಿಯಲ್ಲಿಲಿ **ಅಪರಾಧ ಎಸಗಿರುತ್ತಾರೆಂದು ರುಜುವಾತು ಪಡಿಸಿದ್ದಾರೆಯೇ?**

**ಅಂಶಃ 2** ಎರಡನೆಯದಾಗಿ ದಿನಾಂಕ 28/02/2020 ರಂದು ಬೆಳಿಗ್ಗೆ ಚಿಂತಾಮಣಿ ನಗರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಚಿಂತಾಮಣಿ ನಗರದ ಸೋನಶೆಟ್ಟಿಹಳ್ಳಿಯಲ್ಲಿರುವ ಚಾಸಾ-2 ವೆಂಕಟಚಲಪತಿ ರವರ ಮನೆಗೆ 1 ರಿಂದ 3 ನೇ ಆರೋಪಿತರು ನಿಮ್ಮನ್ನು ಕರೆಯಿಸಿ ಚಾಸಾ-1 ರಿಂದ 6 ರವರ ಸಮಕ್ಷಮ ಚಾಸಾ-2 ರವರು ಈಗ ಸಧ್ಯಕ್ಕೆ ತನ್ನ ಬಳಿ ಹಣ ಇಲ್ಲವೆಂದು ತಿಳಿಸಿದಾಗ ನೀವುಗಳು ಸಮಾನ ಉದ್ದೇಶದಿಂದ ಚಾಸಾ-1 ರಿಂದ 3 ರವರ ಜೊತೆ ಜಗಳ ತೆಗೆದು ಬಾಕಿ ವರದಕ್ಷಿಣೆ ಹಣ 10 ಲಕ್ಷ ರೂ. ಕೊಡುವವರೆಗೆ ಚಾಸಾ-1 ರವರನ್ನು ನಮ್ಮ ಮನೆಗೆ ವಾಪಸ್ಸು ಕರೆದುಕೊಂಡು ಹೋಗುವುದಿಲ್ಲವೆಂದು ಚಾಸಾ-1 ರಿಂದ 3 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ನೆಮ್ಮದಿಗೆ ಶಾಂತಿ ಭಂಗವನ್ನುಂಟು ಮಾಡಿ, ಭಾರತ ದಂಡ ಸಂಹಿತೆ ಕಲಂ 504 ಸಹ ಕಲಂ 34 ರಡಿಯಲ್ಲಿ **ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ರುಜುವಾತು ಪಡಿಸಿದ್ದಾರೆಯೇ?**

**ಅಂಶಃ 3** ಮೂರನೆಯದಾಗಿ, ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ ಚಾಸಾ-1 ರವರ ತವರು ಮನೆಯಿಂದ ವರದಕ್ಷಿಣೆಯಾಗಿ ಚಾಸಾ-1 ರವರಿಗೆ 55 ಗ್ರಾಂ ತೂಕದ ಹಾರ, 120 ಗ್ರಾಂನ 3 ಸೆಟ್ ಬಳೆಗಳು, 90 ಗ್ರಾಂನ ಕಾಸಿನ ಸರ, 80 ಗ್ರಾಂನ ಹಸಿರು ಕಲ್ಲಿನ ಹಾರ, 40 ಗ್ರಾಂನ ಮಿನಿ ಎಲೆಗಳ ಹಾರ, 35 ಗ್ರಾಂನ ಸ್ಟೋನ್ ಮಿನಿ ಹಾರ, 4 ಕೆಜಿ ಬೆಳ್ಳಿ ವಸ್ತುಗಳನ್ನು ಹಾಗೂ 3 ಲಕ್ಷ ರೂ. ಬೆಲೆ ಬಾಳುವ ರೇಷ್ಮೆ ಸೀರೆಗಳನ್ನು ಹಾಗೂ 1 ನೇ ಆರೋಪಿಯಾದ ನಿಮಗೆ ವರದಕ್ಷಿಣೆಯಾಗಿ 40 ಗ್ರಾಂನ ಕತ್ತಿನ ಚೈನ್, 35 ಗ್ರಾಂನ ಬ್ರಾಸ್ಲೈಟ್, 20 ಮತ್ತು 16 ಗ್ರಾಂವುಳ್ಳ 2

ಉಂಗುರ, 2 ಲಕ್ಷ ರೂ. ಬೆಲೆ ಬಾಳುವ ಬಟ್ಟೆಗಳನ್ನು ಮತ್ತು 10 ಲಕ್ಷ ನಗದು ಹಣವನ್ನು ಪಡೆದುಕೊಂಡಿರುತ್ತೀರಿ, ವರದಕ್ಷಿಣೆ ನಿಷೇಧ ಕಾಯಿದೆ ಕಲಂ 3ರಡಿಯಲ್ಲಿ **ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ರುಜುವಾತು ಪಡಿಸಿದ್ದಾರೆಯೇ?**

**ಅಂಶಃ 4** ನಾಲ್ಕನೆಯದಾಗಿ ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ ಮದುವೆಯ ಸಮಯದಲ್ಲಿ ವರದಕ್ಷಿಣೆಯನ್ನು ಪಡೆದುಕೊಂಡಿದ್ದರೂ ಮದುವೆಯಾದ ನಂತರ ಬಾಕಿ ವರದಕ್ಷಿಣೆ ಹಣ 10 ಲಕ್ಷ ರೂ. ತರುವಂತೆ ಚಾಸಾ-1 ರವರಿಗೆ ಕಿರುಕುಳ ನೀಡಿದ್ದು, ವರದಕ್ಷಿಣೆ ನಿಷೇಧ ಕಾಯಿದೆ ಕಲಂ 4ರಡಿಯಲ್ಲಿ **ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ರುಜುವಾತು ಪಡಿಸಿದ್ದಾರೆಯೇ?**

**ಅಂಶಃ5 ಆದೇಶ ಏನು?**

7. ಈ ಮೇಲಿನ ಅಂಶಗಳಿಗೆ ನ್ಯಾಯಾಲಯದ ಉತ್ತರಃ

ಅಂಶ 1 ಃ ನಕಾರತ್ಮಕವಾಗಿ

ಅಂಶ 2 ಃ ನಕಾರತ್ಮಕವಾಗಿ

ಅಂಶ 3 ಃ ನಕಾರತ್ಮಕವಾಗಿ

ಅಂಶ 4 ಃ ನಕಾರತ್ಮಕವಾಗಿ

ಅಂಶ 5 ಃ ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ

8. **ಅಂಶ 1 ರಿಂದ ಅಂಶ 4–** ಅಂಶ 1 ರಿಂದ 4 ಒಂದಕ್ಕೊಂದು ಸಂಬಂಧ ಹೊಂದಿರುವುದಿರಿಂದ ಸಾಕ್ಷಿದಾರರ ಪುನರಾವರ್ತನೆಯನ್ನು ತಡೆಯುವ ಸಲುವಾಗಿ, ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಯಿತು.

9. ಅಭಿಯೋಜನೆಯ ಪ್ರಕರಣದ ಸಾರಾಂಶವೇನೆಂದು ಈ ಮೇಲೆ ತಿಳಿಸಲಾಗಿರುತ್ತದೆ. ಅಭಿಯೋಜನೆಯು ಆರೋಪಿತರ ವಿರುದ್ಧ ಅಪರಾಧಗಳನ್ನು ಸಾಭೀತುಪಡಿಸಲು ಚಾಸಾ-1 ಪ್ರವಳಿಕಾ ರವರು ಫಿರ್ಯಾದುದಾರಾಗಿದ್ದು, ಇವರನ್ನು ಪ್ರಾಸಾ-1 ರವರನ್ನಾಗಿ ವಿಚಾರಣೆಗೆ ಒಳಪಡಿಸಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿಗಳ ಪರಿಚಯ ಇದೆ. ನನಗೂ 1 ನೇ ಆರೊಪಿಗೂ ಗಲಾಟೆ ಆಗಿದ್ದು ಆ ವಿಚಾರವಾಗಿ ನಾನು ಠಾಣೆಗೆ ಹೋಗಿರುತ್ತೇನೆ. ಪೊಲಿಸರು ನನಗೆ ಕೆಲವು ಹಾಳೆಗಳ ಮೇಲೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಅದರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಆರೋಪಿ 1 ರಿಂದ 3 ರವರು ನನಗೆ ಹಲ್ಲೆಮಾಡಿ ಅವ್ಯಾಚ್ಯ ಶಬ್ದಗಳಿಂದ ಬೈದು ವರದಕ್ಷಿಣೆ ಕಿರುಕುಳ ನೀಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದೂರಿನಲ್ಲಿರುವ ಸಹಿನಯನ್ನು ನೋಡಿ ಗುರುತಿಸುತ್ತಾರೆ. ಸದರಿ ಸಹಿಯನ್ನು 9 ವರ್ಷಗಳ ಹಿಂದೆ ಮಾಡಿರುತ್ತೆನೆ. ಯಾವ ವಿಚಾರಕ್ಕೆಂದು ನನಗೆ ಗೊತ್ತಿರುವುದಿಲ್ಲ. ದೂರನ್ನು ನಿಪಿ 1 ಎಂದು ಸಹಿಯನ್ನು ಸಾಕ್ಷಿಗೆ ಕೃತ್ಯ ನಡೆದ ಸ್ಥಳ ಪಂಚನಾಮೆಯನ್ನು ನೊಡಿ ಗುರುತಿಸಿರುತ್ತಾರೆ ಸದರಿ ಸಹಿಯನ್ನು ಪೊಲಿಸ್ ಠಾಣೆಯಲಿ 9 ವರ್ಷಗಳ ಹಿಂದೆ ಮಾಡಿರುತ್ತೆನೆ. ಪಂಚನಾಮೆಯಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಕೊಂಡಿರುವುದಿಲ್ಲ. ಸಾಕ್ಷಿಗೆ ಮತ್ತೊಂದು ಪಂಚನಾಮೆಯಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಸಹ ಪೊಲಿಸ್ ಠಾಣೆಯಲ್ಲಿ 9 ವರ್ಷಗಳ ಹಿಂದೆ ಮಾಡಿರುತ್ತೆನೆ. ಅದರಲ್ಲಿ ಏನು ಬರೆದಿರುತ್ತದೆ ಎಂದು ನನಗೆಗ ಗೊತ್ತಿರುವುದಿಲ್ಲ ಅದನ್ನು ನಿಪಿ 3 ಮತ್ತು ಸಾಕ್ಷಿ ಸಹಿಯನ್ನು ನಿಪಿ 3 ಎ ಎಂದು, ಮಾಲು ಅಮಾನತ್ತು

ಪಂಚನಾಮೆಯಲ್ಲಿರುವ ಸಹಿಯನ್ನು ಪೊಲೀಸ್ ಠಾಣೆಯಲ್ಲಿ 4 ವರ್ಷಗಳ ಹಿಂದೆ ಮಾಡಿರುತ್ತೇನೆ ನನ್ನ ಸಮಕ್ಷಮ ಯಾವುದೇ ವಸ್ತುವನ್ನು ಅಮಾನತ್ತು ಪಡಿಕೊಂಡಿರುವುದಿಲ್ಲ ಎಂದು ಸಂಪೂರ್ಣವಾಗಿ ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದರಿಂದ ಸಹಾಯಕ ಸರ್ಕಾರಿ ಅಭಿಯೋಜಕರ ಪ್ರಾರ್ಥನೆ ಮೇರೆಗೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಗಿ ಸಹಾಯಕ ಸರ್ಕಾರಿ ಅಭಿಯೋಜಕರು ಸುದೀರ್ಘವಾದ ಪಾಟೀ ಸವಾಲು ಮಾಡಲಾಗಿ ಸಾಕ್ಷಿಯು ಅಭಿಯೋಜನೆಗೆ ಅನುಗುಣವಾದ ಯಾವುದೇ ಸಾಕ್ಷ್ಯನ್ನು ನುಡಿಯದೇ ಇದ್ದುದರಿಂದ ಈ ಸಾಕ್ಷಿದಾರ ಸಾಕ್ಷ್ಯದ ಮೂಲಕ ಅಭಿಯೋಜನೆಯು ಆರೋಪಿಯ ವಿರುದ್ಧವಾದ ಅಪರಾಧಗಳನ್ನು ಸಂಶಯಾತೀತವಾಗಿ ರುಜುವಾತು ಪಡಿಸಿರುವುದಿಲ್ಲಾ.

**10.** ಚಾಸಾ-2 ವೆಂಕಟಾಚಲಪತಿ ಮತ್ತು ಚಾಸಾ.3 ಗಿರಿಜಾ ಇವರುಗಳು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಇವರನ್ನು ಫ್ರಾಸಾ-2 ಮತ್ತು 3 ರವರನ್ನಾಗಿ ವಿಚಾರಣೆಗೆ ಒಳಪಡಿಸಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-1 ನನ್ನ ಮಗಳು. ನ್ಯಾಯಾಲಯದ ಮುಂದೆ ಇರುವ ಆರೋಪಿಗಳ ಪರಿಚಯ ಇದೆ. ಚಾಸಾ-1 ಮತ್ತು ಆರೋಪಿಗಳ ಮಧ್ಯೆ ಗಲಾಟೆ ಆಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದು ಸಂಪೂರ್ಣವಾಗಿ ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದರಿಂದ ಸಹಾಯಕ ಸರ್ಕಾರಿ ಅಭಿಯೋಜಕರ ಪ್ರಾರ್ಥನೆ ಮೇರೆಗೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಗಿ ಸಹಾಯಕ ಸರ್ಕಾರಿ ಅಭಿಯೋಜಕರು ಸುದೀರ್ಘವಾದ ಪಾಟೀ ಸವಾಲು ಮಾಡಲಾಗಿ ಸಾಕ್ಷಿಯು ಅಭಿಯೋಜನೆಗೆ ಅನುಗುಣವಾದ ಯಾವುದೇ ಸಾಕ್ಷ್ಯನ್ನು ನುಡಿಯದೇ ಇದ್ದುದರಿಂದ ಈ

ಸಾಕ್ಷಿದಾರ ಸಾಕ್ಷ್ಯದ ಮೂಲಕ ಅಭಿಯೋಜನೆಯು ಆರೋಪಿಯ ವಿರುದ್ಧವಾದ ಅಪರಾಧಗಳನ್ನು ಸಂಶಯಾತೀತವಾಗಿ ರುಜುವಾತು ಪಡಿಸಿರುವುದಿಲ್ಲಾ.

11. ಚಾಸಾ.4 ಜಿ.ಎನ್ ಆನಂದ್ ಕುಮಾರ್ ಸಿ.ಪಿ.ಐ ರವರು ತನಿಖಾಧಿಕಾರಿಯಾಗಿದ್ದು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 03.10.2020 ರಂದು ಈ ಪ್ರಕರಣದ ಕಡತವನ್ನು ಚಾಸಾ-13 ರವರಿಂದ ಪಡೆದು ತನಿಖೆಯನ್ನು ಕೈಗೊಂಡಿರುತ್ತೇನೆ. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಚಾಸಾ-4 ರವರ ಸಮಕ್ಷಮ ಕೃತ್ಯ ನಡೆದ ಸ್ಥಳದ ಪಂಚನಾವೆಯನ್ನು ಮಾಡಿರುತ್ತೇನೆ. ಪಂಚನಾಮೆ ವೇಳೆಯಲ್ಲಿ ಚಾಸಾ-1 ರವರು ಹಾಜರು ಪಡಿಸಿದ 1 ಲಗ್ನ ಪತ್ರಿಕೆ ಮತ್ತು ತನ್ನ ಮದುವೆ ಕಾಲದಲ್ಲಿ ತೆಗೆದು ಭಾವಚಿತ್ರಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಪಚಂನಾಮೆ ಮೂಲಕ ವಶ ಪಡಿಸಿಕ್ೊಂಡು ಠಾಣಾ ಮುದ್ದೆ ಮಾಲು ಸಂ. 106/2020 ರಲ್ಲಿ ಅಳವಡಿಸಿಕೊಂಡಿರುತ್ತೆನೆ. ಮಾನ್ಯ ನ್ಯಾಯಾಲಯದ ಅನುಮತಿ ಪಡೆದಿರುತ್ತೇನೆ. ಅದೇ ದಿನ ಚಾಸಾ-1 ರವರ ಮರುಹೇಳಿಕೆ ಯನ್ನು ಚಾಸಾ-8 ರವರಿಂದ ಮದುವೆ ವೇಳೇಯಲ್ಲಿ ತೇಗೇದು ಭಾವಚಿತ್ರಗಳ ಭಾರತೀಯ ಸಾಕ್ಷ ಅಧಿನಿಯಮ 65(ಬಿ)ರಲ್ಲಿ ಪ್ರಮಾಣ ಪತ್ರ ಪಡೆದಿರುತ್ತೇನೆ.. ದಿನಾಂಕಃ 04.10.2020 ರಂದು ಚಾಸಾ-2 ರಿಂದ ಚಾಸಾ-7 ರವರ ಹೇಳಿಕೆ ಪಡೆದಿರುತ್ತೇನೆ. ದಿಃ 15.10.2020 ರಂದು ಚಾಸಾ-8 ರವರಿಂದ ಹೇಳಿಕೆ ಪಡೆದಿರುತ್ತೇನೆ. ದಿಃ 14.11.2020 ರಂದು ಚಾಸಾ-10 ರವರ ಹೇಳಿಕೆ ಪಡೆದಿರುತ್ತೇನೆ. ಅದೇ ದಿನ ಈ ಪ್ರಕರಣದ ಆರೋಪಿ ಮಂಜುನಾಥ ರೆಡ್ಡಿ, ನಾಗರಾಜ ರೆಡ್ಡಿ, ರಾಧಮ್ಮ ಎಂಬುವವರು

ಮಾನ್ಯ ಜಿಲ್ಲಾ ಸತ್ರ ನ್ಯಾಯಾಲಯದಿಂದ ನೀರಿಕ್ಷಣಾ ಜಾಮೀನು ಪಡೆದು ಹಾಜರು ಪಡಿಸಿದ್ದನ್ನು ನಂತರ ಆರೋಪಿಗಳ ವಿಚಾರಣೆ ಮಾಡಿ ನ್ಯಾಯಾಲಯದ ಆದೇಶದಂತೆ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿಃ 30.11.2020 ರಂದು ಚಾಸಾ–1 ರವರು ತೋರಿಸಿದ ಆರೋಪಿಯ ಮನೆಯ ಮಂದೆ ಚಾಸಾ–11 ಮತ್ತು 12 ರವರ ಸಮಕ್ಷಮ ಪಂಚನಾವೆಯನ್ನು ಮಾಡಿರುತ್ತೇನೆ. ದಿಃ 21.01.2021 ರಂದು ಚಾಸಾ–9 ರವರ ಹೇಳಿಕೆ ಪಡೆದಿರುತ್ತೇನೆ. ದಿಃ 04.02.2021 ರಂದು ಚಾಸಾ–1 ರವರು ಠಾಣೆಗೆ ಬಂದು ಹಾಜರು ಪಡಿಸಿದ ತನ್ನ ಮದುವೆ ಕಾಲದಲ್ಲಿ ಖರಿದಿಸಿದಂತಹ ಒಡವೆಗಳ ಬಿಲ್ಲುಗಳನ್ನು ಹಾಜರು ಪಡಿಸಿದ್ದು ಚಾಸಾ–4 ರವರ ಸಮಕ್ಷಮ ಅಮಾನತ್ತು ಪಡಿಸಿಕೊಂಡು ಠಾಣಾ ಮುದ್ದೆ ಮಾಲು ಸಂ. 17/2021 ರಲ್ಲಿ ಅಳವಡಿಸಿ ಮ್ಯಾನ್ಯ ನ್ಯಾಯಾಲಯದ ಅನುಮತಿ ಪಡೆದಿರುತ್ತೇನೆ. ದಿಃ 05.02.2021 ರಂದು ಪ್ರಕರಣ ತನಿಖೆ ಪೂರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ಆರೋಪಿ 1 ರಿಂದ 3 ರವರ ಮೇಲೆ ಸಾಕಷ್ಟು ಸಾಕ್ಷ್ಯಧಾರಗಳು ಲಭ್ಯವಿದ್ದರಿಂದ ದೋಷಾರೋಪಣಾ ಪಟ್ಟಿಯನ್ನು ನೀವೇದಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ.

**ಆರೋಪಿ ಪರ ಪಾಟಿ ಸವಾಲಿನಲ್ಲಿ ದೂರು ಕೊಟ್ಟ ನಂತರ ಸರ್ವೋಚ್ಚ ನ್ಯಾಯಾಲಯದ ನಿಯಮಾವಳಿ ಅನುಸಾರವಾಗಿ ಪ್ರಕರಣದಲ್ಲಿ ಕರೆಯಿಸಿ ವಿಚಾರಣೆ ಮಾಡಿರುತ್ತೀರಾ ಎಂದರೆ ಮಾಡಿಲ್ಲ.** ದೂರು ನೀಡಿರುವುದು ಸುಳ್ಳು ಆಗಿರುತ್ತದೆ ಎಂದರೆ ಸರಿಯಲ್ಲ. ನಿಪಿ–2 ಮತ್ತು 3 ಪೋಲಿಸ್ ಠಾಣೆಯಲ್ಲಿ ಕೂತು ಮಾಡಿರುತ್ತೀರಿ ಎಂದರೆ ಸರಿಯಲ್ಲ. **ನೀವು ಹೇಳಿರುವ ರೀತಿ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ.**

ಕೂಲಂಕೂಷವಾಗಿ ಪರೀಶಿಲನೆ ಮಾಡಿ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ.

12. ಈ ಮೇಲಿನ ಪ್ರಾಸಾ-1 ರವರು ಫಿರ್ಯಾದುದಾರರಾಗಿದ್ದು ಇವರು ಸಂಪೂರ್ಣವಾಗಿ ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಈ ಸಾಕ್ಷಿದಾರರ ಸಾಕ್ಷ್ಯದ ಮೂಲಕ ಅಭಿಯೋಜನೆಯು ಆರೋಪಿಯ ವಿರುದ್ಧ ಅಪರಾಧಗಳನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ಸಾಧ್ಯವಾಗದೇ ಇದ್ದುದ್ದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಇತರ ಸಾಕ್ಷಿದಾರರಿಗೆ ಸಮನ್ಸ್ ನೀಡಲು ಮಾಡಿಕೊಂಡ ಪ್ರಾರ್ಥನೆಯನ್ನು ತಿರಸ್ಕರಿಸಲಾಯಿತು. ಈ ಪ್ರಕರಣದ ಫಿರ್ಯಾದಿ / ಚಾಸಾ.1 ರವರು ಈ ಪ್ರಕರಣದಲ್ಲಿ ಆರೋಪಿಯ ಹೆಂಡತಿಯಾಗಿದ್ದು ಇವರು ರಾಜಿ ಮಾಡಿಕೊಂಡಿದ್ದು ಅಭಿಯೋಜನೆಗೆ ಬೆಂಬಲಿಸುವಂತಹ ಯಾವುದೇ ಸಾಕ್ಷಿ ಮತ್ತು ಆಧಾರಗಳನ್ನು ಹಾಜರುಪಡಿಸದೇ ಇದ್ದುದ್ದರಿಂದ ಅಭಿಯೋಜನೆಯು ಆರೋಪಿ ರವರ ಪರವಾಗಿ ಯಾವುದೇ ಸಾಕ್ಷಿ ಮತ್ತು ಆಧಾರಗಳನ್ನು ರುಜುವಾತು ಪಡಿಸಲು ಸಾಧ್ಯವಾಗುವುದಿಲ್ಲ. ಈ ಪ್ರಕರಣದ ತನಿಖಾಧಿಕಾರಿ ಸಾಕ್ಷಿದಾರರಾದ ಚಾಸಾ.4 ರವರನ್ನು ಆರೋಪಿ ಪರ ವಕೀಲರಿಂದ ಪಾಟೀ ಸವಾಲಿಗೆ ಒಳಪಡಿಸಿದ್ದು, ಇವರು ಅಭಿಯೋಜನಾ ಸಾಕ್ಷ್ಯಗಳಿಗೆ ಸಂಪೂರ್ಣವಾಗಿ ವಿರುದ್ಧವಾಗಿ ಸಾಕ್ಷಿ ನುಡಿದಿದ್ದರಿಂದ ಇತರೆ ಸಾಕ್ಷಿದಾರರಿಗೆ ಸಮನ್ಸ್ ನೀಡುವುದರಿಂದ ಯಾವುದೇ ಉಪಯೋಗವಾಗುವುದಿಲ್ಲ ಎಂದು ಮನಗಂಡು ಸಹಾಯಕ ಸರ್ಕಾರಿ ಅಭಿಯೋಜಕರ ಪ್ರಾರ್ಥನೆಯನ್ನು ತಿರಸ್ಕರಿಸಲಾಯಿತು. ಆ ಮೂಲಕ ಅಭಿಯೋಜನೆಯು ಆರೋಪಿಯ ವಿರುದ್ಧ ಅಪರಾಧಗಳನ್ನು

ನ್ಯಾಯಾಲಯದ ಮುಂದೆ ಸಂಶಯತೀತವಾಗಿ ರುಜುವಾತುಪಡಿಸದೇ ಇರುವುದರಿಂದ ಸಂಶಯದ ಅನುಕೂಲತೆಯನ್ನು ಆರೋಪಿಗೆ ನೀಡಿ ಅಂಶ 1 ರಿಂದ ಅಂಶ.4 ಕ್ಕೆ ನಕರಾತ್ಮವಾಗಿ ಉತ್ತರಿಸಲಾಗಿದೆ.

13. **ಅಂಶಃ5** ಅಂಶ 1 ರಿಂದ 4 ರಲ್ಲಿ ಚರ್ಚಿಸಲಾದಂತೆ ಈ ಅಂಶವನ್ನು ಈ ಕೆಳಗಿನಂತೆ ಉತ್ತರಿಸುತ್ತೇನೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿರುವ ಅಧಿಕಾರವನ್ನು ಚಲಾಯಿಸುತ್ತಾ ಆರೋಪಿಗಳ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ 498(ಎ) 504 ಸಹವಾಚಕ 34 ಐಪಿಸಿ ವರದಕ್ಷಿಣೆ ನಿಷೇಧ ಕಾಯ್ದೆ ಕಲಂ.3 ಮತ್ತು 4 ರ ಅನ್ವಯ ಅಪರಾಧಗಳಲ್ಲಿ ನಿರ್ದೋಷಿಗಳು ಎಂದು ಬಿಡುಗಡೆ ಮಾಡಲಾಗಿದೆ.

ಆರೋಪಿತರ ಮತ್ತು ಜಾಮೀನುದಾರರ ಜಾಮೀನು ಮುಚ್ಚಳಿಕೆಯು ಅಪೀಲು ಅವಧಿ ಮುಗಿಯುವವರೆಗೂ ಚಾಲ್ತಿಯಲ್ಲಿರುತ್ತದೆ.

ಫಿ.ಎಫ್.ನಂಃ106/2020,ದಿನಾಂಕ 03/10/2020 ರಲ್ಲಿ ತೋರಿಸಿದ ಕ್ರಮ ಸಂಖ್ಯೆ 1 ಮತ್ತು 2 ರಲ್ಲಿ ಒಂದು ಪೋಟೋ ಮತ್ತು ವಿವಾಹ ಲಗ್ನ ಪತ್ರಿಕೆ ಬೆಲೆ ರಹಿತದಾಗಿದ್ದು, ಅದನ್ನು ಅಪೀಲು ಅವಧಿ ಮುಗಿದ ನಂತರ ನಾಶ ಮಾಡಲು ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರಿಂದ ಬೆರಳಚ್ಚು ಮಾಡಿಸಿ ಅದನ್ನು ತಿದ್ದುಪಡಿ ಮಾಡಿ 2026 ನೇ ಇಸವಿ ಆಗಸ್ಟ್ ತಿಂಗಳ 13 ನೇ ದಿನಾಂಕದಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

Sd/-

(ಶ್ರೀಮತಿ ಶಕುಂತಲ.ಆರ್)

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ

ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚಿಂತಾಮಣಿ

## ಅನುಭಂದ

### ಅಭಿಯೋಜನೆಯ ಪರ ವಿಚಾರಿಸಲಾದ ಸಾಕ್ಷಿಗಳ ಪಟ್ಟಿ

ಫ್ರಾಸಾ–1 ಃ ಪ್ರವಳಿಕಾ

ಫ್ರಾಸಾ–2 ಃ ವೆಂಕಟಾಚಲಪತಿ

ಫ್ರಾಸಾ–3 ಃ ಗಿರಿಜಾ

ಫ್ರಾಸಾ–4 ಃ ಜಿ.ಎನ್ ಆನಂದ್ ಕುಮಾರ್

### ಆರೋಪಿತರ ಪರ ವಿಚಾರಿಸಲಾದ ಸಾಕ್ಷಿಗಳ ಪಟ್ಟಿ

ಇಲ್ಲಾ

### ಅಭಿಯೋಜನೆಯ ಪರ ಗುರುತಿಸಲಾದ ದಾಖಲೆಗಳ ಪಟ್ಟಿ

| | | |
|---|---|---|
| ನಿಪಿ–1 | ಃ | ದೂರು |
| ನಿಪಿ–2 ಮತ್ತು 3 | ಃ | ಕೃತ್ಯ ನಡೆದ ಸ್ಥಳದ ಪಂಚನಾಮೆಗಳು |
| ನಿಪಿ–4 | ಃ | ಮಾಲು ಅಮಾನತ್ತು ಪಂಚನಾಮೆ |
| ನಿಪಿ–5 | ಃ | ಫ್ರಾಸಾ.1 ರವರ ಹೇಳಿಕೆ |
| ನಿಪಿ.–6 | ಃ | ಫ್ರಾಸಾ.2 ರವರ ಹೇಳಿಕೆ |
| ನಿಪಿ–7 | ಃ | ಫ್ರಾಸಾ.3 ರವರ ಹೇಳಿಕೆ |
| ನಿಪಿ–8 | ಃ | ವಿವಾಹ ಲಗ್ನಪತ್ರಿಕೆ |
| ನಿಪಿ–ರಿಂದ 18 | ಃ | ಮದುವೆ ಫೋಟೋಗಳು |
| ನಿಪಿ.19 ರಿಂದ 23 | ಃ | ಒಡವೆ ಖರೀದಿ ರಸೀದಿಗಳು |
| ನಿಪಿ.24 | ಃ | ಪ್ರಮಾಣ ಪತ್ರ |

**<u>ಆರೋಪಿತರ ಪರ ಗುರುತಿಸಲಾದ ದಾಖಲೆಗಳ ಪಟ್ಟಿ</u>**

ಇಲ್ಲಾ

**<u>ಗುರುತಿಸಲಾದ ಮುದ್ದೆಮಾಲುಗಳು ಃ</u>**

ಇಲ್ಲಾ

Sd/-

(ಶ್ರೀಮತಿ ಶಕುಂತಲ.ಆರ್)
ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚಿಂತಾಮಣಿ